# ದಿನಾಂಕ 02-07-2022 ರಂದು ಬೆಳ್ಳಿಗ್ಗೆ 10:30 ಗಂಟೆಗೆ ವಾರ್ಡ್-80 ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ:-80 ಹೊಯ್ಸಳನಗರ ವಾರ್ಡ್ ಕಛೇರಿಯಲ್ಲಿ ದಿನಾಂಕ: 02-07-2022 ರಂದು ಬೆಳ್ಳಿಗ್ಗೆ 10:30 ಗಂಟೆಗೆ ವಾರ್ಡ್‌ನ ನೋಡಲ್ ಅಧಿಕಾರಿಯವರಾದ ಶ್ರೀ.ಎಂ.ಲೋಕೇಶ್ ರವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಮತ್ತು ಅಧಿಕಾರಿ / ನೌಕರರು ಸಭೆಯಲ್ಲಿ ಹಾಜರಾಗಿರುತ್ತಾರೆ.

**ಸಭೆಗೆ ಹಾಜರಿದ್ದ ಅಧಿಕಾರಿಗಳು**

1. ಶ್ರೀ.ಎಂ.ಲೋಕೇಶ್ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-80
2. ಶ್ರೀ.ಶಂಕರಪ್ಪ – ಸಹಾಯಕ ಅಭಿಯಂತರರು (ಸದಸ್ಯ ಕಾರ್ಯದರ್ಶಿ)
3. ಶ್ರೀಮತಿ.ವಿಮಲಾ – (ಪಿಹೆಚ್‌ಸಿಓ) ಮರ್ಫಿಟೌನ್ ಹಾಸ್ಪಿಟಲ್ ಸ್ಟಾಫ್
4. ಶ್ರೀ.ಪ್ರಮೋದ್ ಕುಮಾರ್.ಟಿ(ಜೂ.ಹೆಚ್.ಎ.ಎಂ) ಮರ್ಫಿಟೌನ್ ಹಾಸ್ಪಿಟಲ್ ಸ್ಟಾಫ್
5. ಶ್ರೀ.ಶಶಿಕುಮಾರ್ – ಸ.ಅ(ಬಿ.ಡಬ್ಲ್ಯೂ.ಎಸ್.ಎಸ್.ಬಿ)
6. ಶ್ರೀ.ಕೆ.ಎಂ.ನಾರಾಯಣಪ್ಪ – ಎ.ಎಸ್.ಐ (ಇಂದಿರಾನಗರ ಪೊಲೀಸ್ ಠಾಣೆ)
7. ಶ್ರೀ.ಪ್ರಭಾಕರ್ – (ಕಿ.ಅ) ಬೆಸ್ಕಾಂ

**ಸಭೆಗೆ ಹಾಜರಿದ್ದ ಸದಸ್ಯರು**

1. ಶ್ರೀ.ಕುಲಕರ್ಣಿ – ಸದಸ್ಯರು,
2. ಶ್ರೀ.ಸತೀಶ್ ರಾವ್ – ಸದಸ್ಯರು,
3. ಶ್ರೀ.ರಾಮನ್.ಎನ್.ಆರ್ – ಸ್ಥಳೀಯ ನಿವಾಸಿಗಳು,
4. ಶ್ರೀ.ಹರೀಶ್.ಆರ್ – ಸದಸ್ಯರು,
5. ಶ್ರೀ.ಡಿ.ವಿ.ಅಶೋಕ್ – ಸದಸ್ಯರು,
6. ಶ್ರೀ.ಪಿ.ಕುಮಾರ್ – ಸದಸ್ಯರು,

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ಶಂಕರಪ್ಪ, ಸಹಾಯಕ ಅಭಿಯಂತರರು ಸದರಿ ಸಭೆಗೆ ಹಾಜರಾಗಿರುವ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳ ಕುರಿತು ತೆಗೆದುಕೊಂಡ ಕ್ರಮಗಳ ಬಗ್ಗೆ ಪ್ರಸ್ತಾಪಿಸಿ ಬಾಕಿ ಇರುವ ದೂರುಗಳಿಗೆ ಸಂಬಂದಿಸಿದಂತೆ ಕ್ರಮ ವಹಿಸಲಾಗುವುದೆಂದು ತಿಳಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

- ಮೊದಲನೇದಾಗಿ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ಸಮಸ್ಯೆಗಳ ಬಗ್ಗೆ ಪರಿಹರಿಸಿರುವ ವಿವರಗಳನ್ನು ಸಹಾಯಕ ಅಭಿಯಂತರರು ವಿವರಿಸಿದರು.

➢ 6ನೇ ಎ ಮತ್ತು ಬಿ ಮುಖ್ಯರಸ್ತೆ ಇಂದಿರಾನಗರ 2ನೇ ಹಂತ, ಇಲ್ಲಿ ಚರಂಡಿಯಲ್ಲಿನ ಹೂಳು ತೆಗೆದು ರಸ್ತೆಗೆ ಡಾಂಬರೀಕರಣ ಮಾಡಲು ಈಗಾಗಲೇ ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

➢ ಜೈನ್ ಕಾಲೇಜ್ ಸುತ್ತ ಮುತ್ತಲಿನ ಪ್ರದೇಶಗಳಲ್ಲಿರುವ ಅಡ್ಡರಸ್ತೆಗಳಲ್ಲಿ ಕೋರಲಾಗಿದೆ. ಅದರಂತೆ ಕಾಮಗಾರಿಯು ಈ ತಿಂಗಳ ಕೊನೆಯ ಹಂತದಲ್ಲಿ ಮುಕ್ತಾಯಗೊಳಿಸಲಾಗುವುದೆಂದು ಹಿಂದಿನ ಸಭೆಯಲ್ಲಿ ತಿಳಿಸಿರುವಂತೆ ಈಗಾಗಲೇ ಪ್ರಸ್ತುತ ಎಲ್ಲಾ ಅಡ್ಡರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

➢ ಬೆಸ್ಕಾಂ ವತಿಯಿಂದ ಮೆಡ್‌ಪ್ಲಸ್ ಎದುರು, 6ನೇ ಕ್ರಾಸ್, 5ನೇ ಮೇನ್ 5ನೇ ಕ್ರಾಸ್, ಮತ್ತಿತರ ಕಡೆಗಳಲ್ಲಿ ಕೇಬಲ್ ಅಳವಡಿಸಲು ಗುಂಡಿಗಳನ್ನು ಅಗೆದಿದ್ದು, ಅಲ್ಲಿನ ಮಣ್ಣನ್ನು ಹಾಗೇ ಬಿಟ್ಟಿದ್ದು, ಕೂಡಲೇ ಡೆಬ್ರಿಸ್ ತೆರವುಗೊಳಿಸಲು ಸಭೆಯಲ್ಲಿ ತಿಳಿಸಲಾದರು ಬೆಸ್ಕಾಂ ಇಲಾಖೆಯವರು ಇದುವರೆವಿಗೂ ಯಾವುದೇ ಕ್ರಮ ವಹಿಸದಿರುವುದರಿಂದ ಮತ್ತೊಮ್ಮೆ ಸದರಿ ವಿಷಯದ ಬಗ್ಗೆ ಅವಶ್ಯ ಕ್ರಮ ಕೈಗೊಳ್ಳಲು ತಿಳಿಸಲಾಯಿತು. (ಕ್ರಮ:- ಬೆಸ್ಕಾಂ ಇಲಾಖೆ)

➢ 9ನೇ, 12ನೇ ಕ್ರಾಸ್ ಜೊಸೆಫ್ ಕ್ಲಿನಿಕ್ ಹತ್ತಿರ ಹಾಗೂ 16ನೇ ಕ್ರಾಸ್ ಲಕ್ಷ್ಮೀಪುರ ಸ್ಥಳಗಳಲ್ಲಿ ನೀರು ಲೀಕ್ ಆಗುತ್ತಿದ್ದು, ಕೂಡಲೇ ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಕ್ರಮವಹಿಸಲು ಕೋರಿರುವುದರಿಂದ ಸದರಿ



Scanned with OKEN Scanner

ಲೀಕ್ ಸಮಸ್ಯೆಯನ್ನು ಪರಿಹರಿಸಲಾಗಿರುತ್ತದೆ ಎಂದು ಕಿರಿಯ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ ರವರು ತಿಳಿಸಿದರು.

- 6ನೇ ಮುಖ್ಯರಸ್ತೆ ಡಿಫೆನ್ಸ್ ಕಾಲೊನಿಯ ಪ್ರಾರಂಭದಲ್ಲಿ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದ್ದು, ಕೂಡಲೇ ಸಂಬಂಧಪಟ್ಟ ಇಲಾಖೆಯವರು ಕ್ರಮವಹಿಸಲು ತಿಳಿಸಲಾಗಿತ್ತು. ಈ ಬಗ್ಗೆ ಈಗಾಗಲೇ ಸದರಿ ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ ಟ್ರಾಫಿಕ್ ಸಮಸ್ಯೆ ಉಂಟಾಗದಂತೆ ಕ್ರಮವಹಿಸಲಾಗಿರುತ್ತದೆ ಎಂದು ಸಂಚಾರಿ ಪೊಲೀಸ್ ರವರು ತಿಳಿಸಿದರು.
- ಬಿಡಿಎ ಕಾಂಪ್ಲೆಕ್ಸ್ ಹಿಂಭಾಗ ಗಾಂಜಾ ಸೇವನೆಯ ಚಟುವಟಿಕೆಗಳು ನಡೆಯುತ್ತಿದ್ದು, ಕೂಡಲೇ ಬೀಟ್ ಪೊಲೀಸ್‌ರವರು ಕ್ರಮವಹಿಸಲು ಕೋರಲಾಯಿತು. ಈ ಬಗ್ಗೆ ಈಗಾಗಲೇ ಕ್ರಮವಹಿಸಲಾಗಿದ್ದು, ಕೆಲವರ ಮೇಲೆ ಪ್ರಕರಣವನ್ನು ದಾಖಲಿಸಿ ಬೀಟ್ ಪೊಲೀಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ ಎಂದು ಇಂದಿರಾನಗರ ಪೊಲೀಸ್ ಠಾಣೆಯ (ಕಾನೂನು ಸುವ್ಯವಸ್ಥೆ) ಎ.ಎಸ್.ಐ ಶ್ರೀ.ನಾರಾಯಣಪ್ಪ ರವರು ತಿಳಿಸಿದರು.
- 17ನೇ ಬಿ ಕ್ರಾಸ್, ಕೃಷ್ಣ ಟೆಂಪಲ್ ರಸ್ತೆ, ಸಿ.ಎಂ.ಹೆಚ್ ರಸ್ತೆ ಮತ್ತಿತರೆ ವಾರ್ಡ್ ವ್ಯಾಪ್ತಿಯಲ್ಲಿ ಬೀಳುವ ಹಂತದಲ್ಲಿರುವ ಮರದ ರೆಂಬೆ ಕೊಂಬೆಗಳನ್ನು ಕತ್ತರಿಸಲು ಅರಣ್ಯ ಇಲಾಖೆಯವರಿಗೆ ಸೂಚಿಸಲಾಗಿತ್ತು. ಈಗಾಗಲೇ ಈ ಬಗ್ಗೆ ಕ್ರಮ ವಹಿಸಲಾಗಿರುತ್ತದೆ ಎಂದು ಅರಣ್ಯ ಇಲಾಖೆ ರವರು ತಿಳಿಸಿದರು
- ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಹಿಂದಿನ ಸಭೆಯಲ್ಲಿ ಕೋರಿದ್ದು, ಅದರಂತೆ ಕೆಲವು ಕಡೆ ಸರಿಪಡಿಸಲಾಗಿದ್ದು, ಬಾಕಿರುವುದನ್ನು ಕೂಡಲೇ ಸರಿಪಡಿಸಲಾಗುವುದೆಂದು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರು ವಿದ್ಯುತ್ ರವರು ದೂರವಾಣಿ ಮುಖಾಂತರ ತಿಳಿಸಿದರು.
- ಸಿ.ಎಂ.ಹೆಚ್ ರಸ್ತೆ 17ನೇ ಸಿ ಕ್ರಾಸ್‌ನಲ್ಲಿ ಡಕ್ಟ್ ಕವರ್ ಕಿತ್ತು ಹೋಗಿದ್ದು ಇದರಿಂದ ವಾಹನಗಳ ಓಡಾಟಕ್ಕೆ ಅನಾನುಕೂಲವಾಗಿದ್ದು, ಹಾಗೂ ಶಬ್ಧ ಉಂಟಾಗುತ್ತಿದ್ದು, ಕೂಡಲೇ ಸರಿಪಡಿಸಲು ಕೋರಿದರು. ಹಾಗೂ 6ನೇ ಮುಖ್ಯರಸ್ತೆ, 80 ಅಡಿರಸ್ತೆ ರಸ್ತೆ ವಿಭಜಕವನ್ನು ಬಿಎಸ್‌ಎನ್‌ಎಲ್ ವೃತ್ತದವರೆಗೂ ವಿಸ್ತರಿಸಲು ಹಾಗೂ ರಂಬ್ಲರ್ಸ್‌ಗಳನ್ನು ಅಳವಡಿಸಲು ಕೋರಲಾಯಿತು. ಈ ಬಗ್ಗೆ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಲಾಯಿತು.

ಮೇಲ್ಕಂಡಂತೆ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ಎಲ್ಲಾ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳು / ಸಿಬ್ಬಂದಿಗಳು ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಲಾಯಿತು. ಪ್ರಸ್ತುತ ವಾರ್ಡ್ ಸಮಿತಿ ಸಭೆಯಲ್ಲಿ ಈ ಕೆಳಕಂಡ ಸಮಸ್ಯೆಗಳನ್ನು ತಿಳಿಸಲಾಯಿತು.

- ಮರ್ಫಿಟೌನ್ ಸುತ್ತಮುತ್ತಲಿನ ಪ್ರದೇಶದಲ್ಲಿ ಡೆಬ್ರೀಸ್ ಮತ್ತು ರಸ್ತೆ ಗುಂಡಿ ಮುಚ್ಚುವುದು, 6ನೇ ಕ್ರಾಸ್ ಲಕ್ಷ್ಮೀಪುರದಲ್ಲಿ ಕಲ್ವರ್ಟ್ ಸ್ವಚ್ಛಗೊಳಿಸುವುದು ಹಾಗೂ ಡೆಬ್ರೀಸನ್ನು ತೆರವುಗೊಳಿಸುವುದು. ಬಿ.ಡಿ.ಎ ಕಾಂಪ್ಲೆಕ್ಸ್ ಹಿಂಬಾಗ ಮತ್ತು ರಾಘವೇಂದ್ರ ಮಠ ರಸ್ತೆ ಪಾದಚಾರಿ ಮಾರ್ಗದ ಮೇಲೆ ಬೀದಿ ಬದಿಯ / ತಳ್ಳುವಗಾಡಿಯ ಅಂಗಡಿಗಳನ್ನು ತೆರವುಗೊಳಿಸಲು, ವಾರ್ಡ್ ವ್ಯಾಪ್ತಿಯಲ್ಲಿರುವ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ತೆರವುಗೊಳಿಸಲು / ಕೆಡವಿ ಹಾಕಲು ಕ್ರಮ ವಹಿಸುವುದು.
  (ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ:80, ಬಿ.ಬಿ.ಎಂ.ಪಿ).
- 12ನೇ ಕ್ರಾಸ್ ಇಂದಿರಾನಗರ 2ನೇ ಹಂತ ಪಾರ್ಕ್ ಹತ್ತಿರ ಪೌರಕಾರ್ಮಿಕರು ರಸ್ತೆ ಸ್ವಚ್ಛತಾ ಕಾರ್ಯವು ಸಮರ್ಪಕವಾಗಿ ನಿರ್ವಹಿಸದೇ ಇರುವುದು ಹಾಗೂ ನಿವಾಸಿಗಳು ಹಸಿ ಮತ್ತು ಒಣ ಕಸವನ್ನು ಬೇರ್ಪಡಿಸದೇ ನೀಡುತ್ತಿರುವುದರಿಂದ ಕೂಡಲೇ ಕ್ರಮ ವಹಿಸಲು ಸಭೆಯಲ್ಲಿ ಕೋರಲಾಯಿತು.
- 14ನೇ ಕ್ರಾಸ್ ಸಿ.ಎಂ.ಹೆಚ್ ರಸ್ತೆ ಗೋಕುಲ್ ಹೋಟೆಲ್ ಮುಭಾಗ ಮ್ಯಾನ್‌ಹೋಲ್‌ಗಳು ರಸ್ತೆ ಮಟ್ಟಕ್ಕಿಂತ 2 ಇಂಚು ಕೆಳಗಿದ್ದು, ಇದನ್ನು ರಸ್ತೆ ಮಟ್ಟಕ್ಕೆ ಸರಿಪಡಿಸಲು ಕ್ರಮ ವಹಿಸುವುದು
  (ಕ್ರಮ: ಕಿರಿಯ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ).

ಮೇಲ್ಕಂಡಂತೆ ಚರ್ಚಿಸಲಾಗಿರುವ ಎಲ್ಲಾ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕೂಡಲೇ ಕ್ರಮವಹಿಸಲು ಹಾಗೂ ಕ್ರಮ ವಹಿಸಿರುವ ಬಗ್ಗೆ ಮುಂದಿನ ಸಭೆಗೆ ವರದಿಸಲು ತಿಳಿಸಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

02/3/2022

ಕಾರ್ಯದರ್ಶಿಗಳು
ವಾರ್ಡ್ ಸಮಿತಿ-80

ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ 80
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ 80



Scanned with OKEN Scanner